# ‘ಬರೆದ ಹಾಡು ಮರೆತುಬಿಡುವೆ’



**ಹೃದಯಶಿವ**

**1** ಕಥೆಯಲ್ಲಿ ಪಾತ್ರಗಳ ಹಿನ್ನೆಲೆ, ಮುನ್ನೆಲೆಗಳು, ಎಲ್ಲಿಯವರೆಗೆ ಕಥೆ ನಡೆದುಕೊಂಡು ಬಂದಿದೆ, ಯಾವ ಸನ್ನಿವೇಶದಲ್ಲಿ ಸಾಂಗ್ ಬರುತ್ತದೆ, ಆ ಸಾಂಗ್ ಲೀಡ್ ಏನು, ಅಲ್ಲಿಯ ತನಕ ದೃಶ್ಯಗಳಲ್ಲಿ ಆ ಪಾತ್ರ ಏನ್ ಫೀಲ್ ಮಾಡಿರುತ್ತದೆ, ಆ ಪಾತ್ರದ ಮೂಲಕ ಯಾವ ಸಾಲುಗಳಲ್ಲಿ ಯಾವ ಭಾವ ವ್ಯಕ್ತಪಡಿಸಬೇಕು ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಟ್ಯೂನ್‌ಗೆ ಅನುಗುಣವಾಗಿ ಬರೆಯಬೇಕು. ಇದಿಷ್ಟು ನಾನು ಮಾಡಿಕೊಳ್ಳುವ ಸಿದ್ಧತೆ.

**2** ಚಿತ್ರಸಾಹಿತ್ಯ ಬರೆಯುವವರಿಗೆ ಗೊತ್ತಿರಬೇಕಾದ ಮೊದಲ ತಂತ್ರವದು. ಆ ಟ್ಯೂನ್‌ಗೆ ತಕ್ಕಂತೆ ಬರೆದಾಗ ಅದು ಫಿಟ್ ಆಗುತ್ತದೆ. ಟ್ಯೂನ್‌ಗೆ ಒಂದು ಲಯ ಇರುತ್ತದೆ. ಅದಕ್ಕೆ ತಕ್ಕಂತೆ ಬರೆದಾಗ ಎಲ್ಲವೂ ಸರಿ ಎಂದು ತಾನಾಗಿಯೇ ಗೊತ್ತಾಗುತ್ತದೆ. ಯಾವುದೋ ಒಂದು ರಾಗದ ಹಿನ್ನೆಲೆ ಇಟ್ಟುಕೊಂಡು ಆ ಟ್ಯೂನ್ ಸಂಯೋಜಿಸಲಾಗಿರುತ್ತದೆ. ಆ ರಾಗಕ್ಕೊಂದು ಭಾವ ಇರುತ್ತದೆ. ಅದು ಯಾವ ರಾಗವೆಂದು ಚಿತ್ರಸಾಹಿತಿಗೆ ಗೊತ್ತಿರದಿದ್ದರೂ ಅದರೊಳಗಿನ ಯಾತನೆ ಎಂತಹದ್ದೆಂದು ತಿಳಿದಿರಬೇಕು. ಆಗ ಆ ರಾಗದ ಬಯಕೆ ಅರ್ಥವಾಗುತ್ತದೆ. ಆಗ ತನಗೆ ಗೊತ್ತಿಲ್ಲದಂತೆ ಆತ ಸಾಲುಗಳನ್ನು ಬರೆಯುತ್ತಾನೆ.

**3** ಪ್ರತಿಯೊಬ್ಬರಿಗೂ ಮನಸ್ಸು, ಹೃದಯ ಇರುತ್ತದೆ. ಅವರವರಿಗೆ ಅನುಗುಣವಾಗಿ, ಅವರವರ ಹಿನ್ನೆಲೆ, ಅವರವರ ಪ್ರೀತಿ ಯಾವ ರೀತಿ ಮಿಡಿಯುತ್ತದೋ ಆ ರೀತಿಯ ಭಾವನೆಗಳು ಉದ್ಭವವಾಗುತ್ತವೆ. ಗೀತೆ ಅಥವಾ ಕವಿತೆ ಅಂತ ತೆಗೆದುಕೊಂಡಾಗ ಕೆಲವೊಂದು ಸಿದ್ಧ ನಿಯಮಗಳನ್ನು ಅನುಸರಿಸಿ ಆದಷ್ಟು ಕೃತಕತೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕವಿಯ ದೃಷ್ಟಿಕೋನಕ್ಕೆ ಅನುಗುಣವಾಗಿ ಆತ ಒಬ್ಬ ಪ್ರೇಮಿಯಾಗಿ ಫೀಲ್ ಮಾಡಿದಾಗ ಯಾವ ರೀತಿ ವರ್ತಿಸುತ್ತಾನೆಯೋ, ಯಾವ ರೀತಿಯ ಭಾವನೆಗಳು ತನ್ನೊಳಗೆ ಹುಟ್ಟಿಕೊಳ್ಳುತ್ತಾವೆಯೋ ಅದನ್ನು ಆತ ಬರೆಯುತ್ತಾನೆ. ಜಗತ್ತಿನ ಎಲ್ಲ ಭಾವನೆಗಳನ್ನು ಏಕಕಾಲಕ್ಕೆ ಹಿಡಿದಿಡಲು ಆಗದು. ಪ್ರತಿಮೆಗಳು, ರೂಪಕಗಳಲ್ಲಿ, ಉಪಮೇಯಗಳಲ್ಲಿ, ವಾಕ್ಯ ಸಂಯೋಜನೆ ಹಾಗೂ ಪದ ಚಮತ್ಕಾರದಲ್ಲಿ ಆದಷ್ಟು ಹೊಸತನ ತರಬೇಕಾಗುತ್ತದೆ. ಎಲ್ಲೊ ಒಂದು ಕಡೆ ಅತ್ಯಂತ ರಿಪೀಟ್ ಎನಿಸುವ ಭಾವಗಳು ವ್ಯಕ್ತವಾಗುತ್ತವೆ. ಅವು ದೀರ್ಘಕಾಲಿಕವಾಗಿ ಉಳಿಯುವಂತಹ ಗೀತೆಗಳಾಗುತ್ತವೆ.